ಒಂದು ಫಿಲ್ಟರ್ ಇರುತ್ತಿತ್ತು. ಅಲ್ಲಿಯೇ ಅದರ ಸರಿ–ತಪ್ಪುಗಳ ಪರೀಕ್ಷೆಯಾಗುತ್ತಿತ್ತು. ಈಗ ಆ ಕೆಲಸವನ್ನು ಪ್ರಕಟಣಾನಂತರ ಮಾಡಬೇಕಿದೆ. ಇದು ಒಂದು ಮಟ್ಟದ ಬದಲಾವಣೆ. ಆದರೆ, ಜಾಲತಾಣದ ಬರಹಕ್ಕಿಂತ ಪುಸ್ತಕ ರೂಪದ ಬರಹಕ್ಕೆ ಇಂದಿಗೂ ಹೆಚ್ಚಿನ ಗೌರವವಿದೆ. ಅದು ನಿಜವೇ ಆಗಿದ್ದರೆ, ತಂತ್ರಜ್ಞಾನದ ಪ್ರಭಾವ ಮುದ್ರಿತ ಸಾಹಿತ್ಯದ ಮೇಲೆ ಯಾವ ರೀತಿಯದ್ದಾಗಿರಬಹುದು? ಈ ಪ್ರಶ್ನೆಗೆ ಉತ್ತರವನ್ನು 'ವ್ಯಾನಿಟಿ ಪಬ್ಲಿಷಿಂಗ್' ಎನ್ನುವ ಹೆಸರಿನಡಿಯಲ್ಲಿ ಚರ್ಚಿಸಲಾಗಿದೆ. ಮುದ್ರಣ ತಂತ್ರ ಈಗ ಎಷ್ಟರ ಮಟ್ಟಿಗೆ ಮುಂದುವರೆದಿದೆಯೆಂದರೆ, ಪ್ರಿಂಟ್–ಆನ್–ಡಿಮ್ಯಾಂಡ್ ತಂತ್ರಜ್ಞಾನದಲ್ಲಿ ಪುಸ್ತಕದ ಒಂದೇ ಒಂದು ಪ್ರತಿಯನ್ನು ಮುದ್ರಿಸುವುದೂ ಸಾಧ್ಯ. ಹೀಗಾಗಿ ಅಣಬೆಗಳಂತೆ ಹೊಸ ಲೇಖಕರು ಹುಟ್ಟುತ್ತಿದ್ದಾರೆ. ಅವರುಗಳು ಪುಸ್ತಕಗಳನ್ನು ಪ್ರಕಟಿಸಿ ಲೇಖಕರಾಗುತ್ತಿದ್ದಾರೆ. ಆದರೆ, ಹಾಗೆ ಪ್ರಕಟವಾಗಿರಬಹುದಾದ ಸಾಹಿತ್ಯದ ಗುಣಮಟ್ಟ ಒಂದು ನೆಲೆಯಲ್ಲಿ ಸವಾಲನ್ನೇ ಉಂಟುಮಾಡುತ್ತದೆ. ಸ್ವತಃ ಖರ್ಚುಮಾಡಿ ಕೆಲವೇ ಪ್ರತಿಗಳನ್ನು ಮುದ್ರಿಸಿ ಲೇಖಕರಾಗುವ ಪ್ರಕ್ರಿಯೆಯಲ್ಲಿ ಗುಣಮಟ್ಟದ ಪರೀಕ್ಷೆಯನ್ನೊಡ್ಡುವುದು ಕಷ್ಟದ ಮಾತೇ...

ಪುಸ್ತಕ ಪ್ರೀತಿಯ ವಿಷಯಕ್ಕೆ ಬಂದಾಗ ಒಂದು ಮಾತನ್ನು ಚರ್ಚಿಸದೇ ಮುಂದುವರೆಯುವುದು ಸಾಧ್ಯವಿಲ್ಲ. ಅದೆಂದರೆ ಪುಸ್ತಕಗಳ ಖಾಸಗಿ ಸಂಗ್ರಹಗಳನ್ನು ನಾವೆಲ್ಲಾ ಕಟ್ಟಿಕೊಳ್ಳುತ್ತೇವೆ. ಈ ಸಂಗ್ರಹಗಳಲ್ಲಿ ಓದಿರುವ ಪುಸ್ತಕಗಳಿಗಿಂತ ಓದುವ ಆಶಯವಿಟ್ಟು ಕೊಂಡುತಂದಿರುವ ಪುಸ್ತಕಗಳೇ ಹೆಚ್ಚಿರುತ್ತವೆ. ಜೊತೆಗೆ ಓದಲು ಬಲವಂತ ಮಾಡುವ ಲೇಖಕರೇ ಪ್ರೀತಿಯಿಂದ ಕಳುಹಿಸಿಕೊಟ್ಟ ಪುಸ್ತಕಗಳೂ ಇರುತ್ತವೆ. ಇವುಗಳನ್ನು ನಿಭಾಯಿಸುವುದು ಸರಳವಾದ ವಿಚಾರವೇನೂ ಅಲ್ಲ. ಕೆಲವರು ಸಂಗ್ರಹವನ್ನು ಖಾಸಗಿಯಾಗಿಟ್ಟುಕೊಂಡು ಪುಸ್ತಕಗಳನ್ನು ಯಾರೊಂದಿಗೂ ಹಂಚಿಕೊಳ್ಳದೇ ಸ್ವಾರ್ಥಿಗಳಾಗಿರುತ್ತಾರೆ. ಹೀಗಿದ್ದರೂ ಪುಸ್ತಕ ನಮ್ಮ ಕೈಸೇರಬೇಕು ಎನ್ನುವ ತುರ್ತೇ ಮುಖ್ಯವಾದದ್ದು. ನಮ್ಮ ಕೈಸೇರಿದ ನಂತರ ಅದನ್ನು ಹೇಗೆ ನಾವು ನಿಭಾಯಿಸುತ್ತೇವೆ ಎನ್ನುವುದು ಅವರವರ ಸಂದರ್ಭ ಮತ್ತು ಪ್ರೀತಿಗೆ ಬಿಟ್ಟದ್ದು.

ಪುಸ್ತಕ ಒಂದು ಭೌತಿಕ ವಸ್ತುವೆಂದು ನಾವು ಅದನ್ನು ಬದಿಗಿಡುವಂತೆಯೂ ಇಲ್ಲ. ಉಂಬರ್ಟೋ ಇಕೊರ ಮನೆಯಲ್ಲಿ ಒಮ್ಮೆ ಕಳ್ಳತನವಾದ ವಿಷಯವನ್ನು ಪ್ರಸ್ತಾಪಮಾಡುತ್ತಾರೆ. ಬಂದ ಕಳ್ಳರಿಗೆ ಹೆಚ್ಚಿನದ್ದೇನೂ ಕಾಣದೇ ಕೈಗೆಸಿಕ್ಕದ್ದನ್ನು ಒಯ್ದರಂತೆ. ಒಟ್ಟಾರೆ ಕಳ್ಳತನದಲ್ಲಿ ಕಳೆದುಕೊಂಡ ವಸ್ತುಗಳ ಮೌಲ್ಯ ಎದುರಿಗೇ ಇದ್ದ ಮೂರು ಅಮೂಲ್ಯ ಪುಸ್ತಕಗಳ ಮೌಲ್ಯಕ್ಕಿಂತ ಕಡಿಮೆಯಿತ್ತು ಎನ್ನುತ್ತಾರೆ. ಆದರೆ, ಕಳ್ಳರಿಗೂ ವಿಚಕ್ಷಣಾ ವಿವೇಕವಿರಬೇಕಲ್ಲವೇ? ಒಂದು ಟೀವಿ, ಬಂಗಾರದ ಸರ, ದುಡ್ಡು, ಎಲ್ಲಕ್ಕೂ ಒಂದು ಭಿನ್ನವಾದ ಮೌಲ್ಯ ಮತ್ತು ಉಪಯೋಗವಿದೆಯಾದರೂ, ಪ್ರತಿ ಪುಸ್ತಕಕ್ಕೆ ತನ್ನದೇ ಆದ ಗುರುತೂ ವ್ಯಕ್ತಿತ್ವವೂ ಇರುತ್ತದೆ. ಅದು ಇದ್ದಷ್ಟೂ ದಿನ ಪುಸ್ತಕಗಳ ಮಹತ್ವ ಕಮ್ಮಿಯಾಗುವುದಿಲ್ಲವೇನೋ?

ಅನೇಕ ಪುಸ್ತಕಗಳ ಸಂಗ್ರಹವಿರುವ ಒಂದು ಯುಎಸ್‌ಬಿ ಕಡ್ಡಿ, ಅಥವಾ ಕಿಂಡಲ್‌ನಂತಹ ಪರಿಕರವನ್ನು ಕದ್ದರೆ ಅಲ್ಲಿ ಸಿಗುವುದು ಪುಸ್ತಕಗಳ ಸಂಗ್ರಹ. ಆ ಸಂಗ್ರಹವನ್ನು ಅಳಿಸಿ ಅದನ್ನೊಂದು ಎಲೆಕ್ಟ್ರಾನಿಕ್ ಪರಿಕರವನ್ನಾಗಿ ಉಪಯೋಗಿಸಬಹುದು. ಅದರ ಸಂಗ್ರಹದಲ್ಲಿ ಬೇರೆ ಕಂಟೆಂಟ್ ಸೇರಿಸಬಹುದು. ಆದರೆ, ಒಂದು ಪುಸ್ತಕವನ್ನು ಕೈಯಲ್ಲಿ ಹಿಡಿದರೆ ಅದು ತನ್ನದೇ ಒಂದು ಭಿನ್ನ ವ್ಯಕ್ತಿತ್ವವನ್ನು ಸಂಕೇತಿಸುತ್ತದೆ.

ಕಡೆಯ ಮಾತು – ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಅನೇಕ ಪುಸ್ತಕಗಳನ್ನು ಒಂದು ಯಂತ್ರದಲ್ಲಿನ ಸಂಗ್ರಹ, ಖಾಸಗಿ ಮತ್ತು ಸ್ವಾರ್ಥದ ಪ್ರತೀಕ ಎಂದು ಭಾವಿಸಬಹುದು. ಮೊಬೈಲನ್ನಾಗಲೀ, ಕಿಂಡಲನ್ನಾಗಲೀ ಯಾರ ಜೊತೆಗೂ ಹಂಚಿಕೊಳ್ಳುವುದಿಲ್ಲ. ಹಂಚಿಕೊಳ್ಳಬೇಕಿದ್ದರೂ ಆ ಪರಿಕರದಲ್ಲಿರುವ ಒಂದು ಪುಸ್ತಕವನ್ನು ಒಬ್ಬರು ಓದುತ್ತಿರುವಾಗ ಅಲ್ಲಿನ ಮಿಕ್ಕ ಪುಸ್ತಕಗಳು ಬೇರಾರ ಕೈಗೂ ಸಿಗುವುದಿಲ್ಲ. ಆದರೆ, ಗ್ರಂಥಾಲಯದಲ್ಲಿರುವ ಅಥವಾ ಭೌತಿಕ ಸಂಗ್ರಹದಲ್ಲಿರುವ ಪುಸ್ತಕಗಳನ್ನು ಹಂಚಿಕೊಳ್ಳಬಹುದು. ಒಂದೇ ಪುಸ್ತಕವನ್ನು ಅನೇಕರು ಓದಬಹುದು. ಈ ರೀತಿಯ ಸಾಮೂಹಿಕತೆ ಆಧುನಿಕ ತಂತ್ರಜ್ಞಾನಕ್ಕೆ ಇನ್ನೂ ಒಗ್ಗಿಲ್ಲ. ●